ಗ್ರೀನ್ ಪ್ರತಿಷ್ಠಾನ, ಡಾ: ಜಿ.ಎನ್.ಎಸ್. ರೆಡ್ಡಿ ಉಪಾಧ್ಯಕ್ಷರು, ಪ್ರೊ: ರಮೇಶ್, ನ್ಯಾಷನಲ್ ಲಾ ಸ್ಕೂಲ್ ಬೆಂಗಳೂರು, ಶ್ರೀ ಜಿ. ಕೃಷ್ಣ ಪ್ರಸಾದ್ ಗ್ರೀನ್ ಪ್ರತಿಷ್ಠಾನ ಬೆಂಗಳೂರು ಇವರು ಈ ಒಂದು ಬೀಜ ಮಸೂದೆ ಸಂವಾದ ಕಾರ್ಯಕ್ರಮವನ್ನು ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿರುತ್ತಾರೆ. ಎಲ್ಲಾ ಶಾಸಕರು ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 2ನೇ ಆಗಸ್ಟ್ ಮಾಹೆ 2005ರ ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

11. ಅನುಬಂಧ-I, II, III

ಅನುಬಂಧ - I,

20.7.05 ಚುಕ್ಕೆ ಗುರುತಿನ ಪ್ರಶ್ನೋತ್ತರಗಳು:

ಸ್ವಚ್ಛಗ್ರಾಮ ಯೋಜನೆಯ ವಿವರ.

496 (6001) ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ್) ಮಾನ್ಯ ಗ್ರಾ.ನೀ.ಸ. ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 2004-05ನೇ ಸಾಲಿನಲ್ಲಿ ಸ್ವಚ್ಛಗ್ರಾಮ ಯೋಜನೆಯಲ್ಲಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ;

ಆ) ಈಗಾಗಲೇ ಮಂಜೂರಾದ ಕಾಮಗಾರಿಗಳು ಪ್ರಾರಂಭವಾಗಿದೆಯೇ;

ಇ) ಈ ಕಾಮಗಾರಿಗಳಿಗಾಗಿ, ಸಾರ್ವಜನಿಕ ವಂತಿಗೆ ಹಣ ಸಂದಾಯ ಮಾಡಿದರೂ ಕೂಡ ಈವರೆವಿಗೂ ಪ್ರಾರಂಭವಾಗದಿರಲು ಕಾರಣವೇನು?

ಶ್ರೀ ಬಿ. ಸತ್ಯನಾರಾಯಣ (ಮಾನ್ಯ ಗ್ರಾ.ನೀ.ಸ. ರಾಜ್ಯ ಸಚಿವರು):

ಅ) 2005-05ರ ಸಾಲಿನಲ್ಲಿ 104 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಆ) ಮಂಜೂರಾದ ಗ್ರಾಮಗಳಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಟೆಂಡರಿಂಗ್ ಪ್ರಕ್ರಿಯೆ ನಡೆದಿದೆ.

ಇ) ಸಮುದಾಯ ವಂತಿಗೆ ಹೊರತುಪಡಿಸಿ, ಪ್ರತಿ ಗ್ರಾಮಕ್ಕೆ ಸರ್ಕಾರ ಈಗಾಗಲೇ ರೂ 1.32 ಲಕ್ಷದಂತೆ ಒಟ್ಟು ರೂ 137.20 ಲಕ್ಷ ಬಿಡುಗಡೆ ಮಾಡಿದೆ. ಹಿಂದಿನ ಗ್ರಾಮ ಪಂಚಾಯತ್‌ಗಳ ಅವಧಿ ಮುಗಿದು ಚುನಾಯಿತ ನೂತನ ಅಧ್ಯಕ್ಷರುಗಳ ಅವಧಿ ಮುಗಿದು ಚುನಾಯಿತ ನೂತನ ಅಧ್ಯಕ್ಷರುಗಳು ಮತ್ತು ಸದಸ್ಯರುಗಳನ್ನೊಳಗೊಂಡ ಗ್ರಾಮ ಪಂಚಾಯತ್‌ಗಳು ಕಳೆದ 4 ತಿಂಗಳಲ್ಲಿ ಅಸ್ಥಿತ್ವಕ್ಕೆ ಬಂದಿರವುದರಿಂದ ಟೆಂಡರ್ ವ್ಯವಸ್ಥೆ ಮೂಲಕ ಕೆಲಸ ಪ್ರಾರಂಭಿಸುವಲ್ಲಿ ಸ್ವಲ್ಪ ವಿಳಂಬವಾಗಿದೆ. ಸದ್ಯದಲ್ಲಿಯೇ ಅನುಮೋದನೆಯಾದ ಎಲ್ಲಾ ಗ್ರಾಮಗಳಲ್ಲಿ ಕಾಮಗಾರಿಗಳು ಪ್ರಾರಂಭವಾಗುತ್ತವೆ.

ಕುಡಿಯುವ ನೀರಿನ ಕೊರತೆ ಹಾಗೂ "ಕುಗ್ರಾಮ-ಸುಗ್ರಾಮ" ಯೋಜನೆ ಅನುಷ್ಠಾನ

497 (5722) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) ಮಾನ್ಯ ಗ್ರಾ.ನೀ.ಸ. ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿಗ್ಗಾಂವ-ಸವಣೂರ ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಕೊಳಚೆ ಬಾವಿ ನೀರಿನ ಮಟ್ಟ ಕುಸಿದಿದ್ದು ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ;

ಇ. ಸರ್ಕಾರವು ಕುಗ್ರಾಮ–ಸುಗ್ರಾಮ ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಿದ್ದು ಶಿಗ್ಗಾಂವ್–ಸವಣೂರ ತಾಲ್ಲೂಕಿನ ಅತ್ಯಂತ ಹಿಂದುಳಿದ ಯಾವ ಯಾವ ಹಳ್ಳಿಗಳನ್ನು ಈ ಯೋಜನೆಗಾಗಿ ಆಯ್ಕೆ ಮಾಡಲಾಗಿದೆ (ಮಾಹಿತಿ ಒದಗಿಸುವುದು);

ಈ. ಹಾಗಿದ್ದಲ್ಲಿ, ಆ ಹಳ್ಳಿಗಳಿಗೆ ಅತ್ಯಗತ್ಯವಾದ ರಸ್ತೆ ಶಾಲೆ ಚರಂಡಿ ಮತ್ತು ಶೌಚಾಲಯ ಸೌಕರ್ಯವನ್ನು ಒದಗಿಸಿ, ಹಳ್ಳಿಗಳ ಜನರ ಜೀವ ಸ್ಥಿತಿಯನ್ನು ಸುಧಾರಿಸುವ ಕಾರ್ಯಕ್ರಮವನ್ನು ಸರ್ಕಾರ ಯಾವಾಗ ಅನುಷ್ಠಾನ ಗೊಳಿಸುವುದು?

ಶ್ರೀ ಬಿ. ಸತ್ಯನಾರಾಯಣ (ಮಾನ್ಯ ಗ್ರಾ.ನೀ.ಪಂ. ರಾಜ್ಯ ಸಚಿವರು)

ಅ. ಹಾವೇರಿ ಜಿಲ್ಲೆಯ 7 ತಾಲ್ಲೂಕುಗಳ 246 ಗ್ರಾಮ/ ಜನವಸತಿಗಳಲ್ಲಿ ಅಂತರ್ಜಲ ಮಟ್ಟ ಕುಸಿತದಿಂದ ಕುಡಿಯುವ ನೀರಿನ ಸಮಸ್ಯೆಯಿರುವುದು ಕಂಡು ಬಂದಿದೆ.

ಆ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ತಾಲ್ಲೂಕು ಮಟ್ಟದ ಕಾರ್ಯಪಡೆ ರಚಿಸಲಾಗಿದ್ದು ಸ್ಥಳೀಯ ಅವಶ್ಯಕತೆಯನುಸಾರ ಪುನಶ್ಚೇತನ ಕಾಮಗಾರಿಗಳನ್ನು ಮಳೆ ನೀರು

ಇ. ಸುಗ್ಗಿಕಾರ್ಯಕ್ರಮದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈಗಾಗಲೇ ತಾಲ್ಲೂಕು ಮಟ್ಟದ ಕಾರ್ಯಪಡೆ ಮುಖೇನ ಹಾವೇರಿ ಜಿಲ್ಲೆಯಲ್ಲಿ ರೂ. 200.00 ಲಕ್ಷ ವೆಚ್ಚವಾಗಿದೆ. ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಇಷ್ಟರಲ್ಲೇ ಗ್ರಾಮಗಳನ್ನು ಆಯ್ಕೆ ಮಾಡಿ ಜಿಲ್ಲಾ ಪಂಚಾಯತಿಗಳಿಗೆ ತಿಳಿಸಲಾಗುವುದು.

ಈ. ಆಯ್ಕೆಯಾದ ಗ್ರಾಮಗಳ ಗ್ರಾಮ ಸಭೆ/ ವಾರ್ಡ್ ಸಭೆ ಮುಖೇನ ಅಗತ್ಯತೆಯನುಸಾರ ಮತ್ತು ಅನುದಾನ ಲಭ್ಯತೆ ಆಧರಿಸಿ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗುವುದು. ಈ ಕಾರ್ಯಕ್ರಮವನ್ನು ಪ್ರಸ್ತುತ ವರ್ಷದಲ್ಲಿ ಪ್ರಾರಂಭಿಸಿ ಮುಂದಿನ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

ಹೊಸ ಪದವಿ ಪೂರ್ವ ಕಾಲೇಜು ಸ್ಥಾಪಿಸುವುದು.

498 (6009) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮಂಡ್ಯ ನಗರಕ್ಕೆ ಹೊಸದಾಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಆಲೋಚನೆ ಸರ್ಕಾರಕ್ಕಿದೆಯೆ:

ಆ. ಹಾಗಿದ್ದಲ್ಲಿ ಬಾಲಕರಿಗೆ ಅಥವಾ ಬಾಲಕಿಯರಿಗೆ ಪ್ರತ್ಯೇಕ ಕಾಲೇಜುಗಳನ್ನು ಪ್ರಾರಂಭಿಸಲಾಗುವುದೇ; (ವಿವರ ನೀಡುವುದು)

ಇ. ಮಂಡ್ಯದಲ್ಲಿ ಎರಡು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದು ಯಾವ ಹಂತದಲ್ಲಿದೆ;

ಈ. ಮಂಡ್ಯ ನಗರದಲ್ಲಿ ಪದವಿ ಪೂರ್ವ ಕಾಲೇಜಿನ ಪ್ರವೇಶಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿರುವುದರಿಂದ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವ ಆಲೋಚನೆ ಸರ್ಕಾರಕ್ಕಿದೆಯೇ?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ. ಪ್ರಸಕ್ತ ಸಾಲಿನಲ್ಲಿ ಇಲ್ಲ.

ಆ. ಈಗಾಗಲೇ ಮಂಡ್ಯ ನಗರದಲ್ಲಿ 03 ಸರ್ಕಾರಿ, ಒಂದು ಅನುದಾನಿತ ಮತ್ತು 09 ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿವೆ. 03 ಸರ್ಕಾರಿ ಕಾಲೇಜುಗಳ ಪೈಕಿ 02 ಬಾಲಕಿಯರ ಪದವಿ ಪೂರ್ವ ಕಾಲೇಜುಗಳಿವೆ. ಆದ್ದರಿಂದ ಬಾಲಕರಿಗೆ ಅಥವಾ ಬಾಲಕಿಯರಿಗೆ ಪ್ರತ್ಯೇಕ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಉದ್ದೇಶವಿಲ್ಲ.